ಮಾಡುತ್ತಿದ್ದಾರೆ, ಯಾರು ಮಾಡುತ್ತಿಲ್ಲ ಎಂಬುದನ್ನು ಚೆಕ್ ಮಾಡಿಸಬೇಕು. ಇವನ್ನು ಮೊದಲು ಕಂಟ್ರೋಲ್ ಮಾಡಿದರೆ ವಿದ್ಯುತ್ ಕೊರತೆಯ ತಾಪತ್ರಯವೇ ಇರುವುದಿಲ್ಲ. ಆದ್ದರಿಂದ ಇದರ ಬಗ್ಗೆ ಸೂಕ್ತ ಕ್ರಮ ಕೈಕೊಳ್ಳಬೇಕೆಂದು ಕೇಳಿ ಕೊಳ್ಳುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ.—ಎನರ್ಜಿ ಎನ್‌ಟೈಟಲ್‌ಮೆಂಟ್ ಎಂದು ಫಿಕ್ಸ್ ಮಾಡಿರುತ್ತೇವೆ. ಖಾಸಗಿಯವರು ಉಪಯೋಗಿಸಿಕೊಳ್ಳಲು ಅವಕಾಶ ಇರತಕ್ಕಂಥ ಅಷ್ಟು ಯೂನಿಟುಗಳನ್ನು ಅವರು ಯಾವ ರೀತಿ ಬೇಕಾದರೂ ಉಪಯೋಗಿಸಿಕೊಳ್ಳಬಹುದು. ಅವರ ಉಪಯೋಗದ ಮೇಲೆ ನಮಗೆ ಕಂಟ್ರೋಲ್ ಬರುವುದಿಲ್ಲ. ಸರ್ಕಾರಿ ಮತ್ತು ಬೇರೆ ನಗರಸಭೆಗಳಿಗೆ ಈ ಬಗ್ಗೆ ಕಟ್ಟುನಿಟ್ಟಾದ ಸೂಚನೆ ಕೊಟ್ಟಿದ್ದೇವೆ. ವಿದ್ಯುತನ್ನು ಮಿತವ್ಯಯ ಮಾಡಬೇಕು ಹಾಗೂ ಉಳಿಸಬೇಕೆಂದು ಹೇಳಿದ್ದೇವೆ. ಇಂತಹ ಸಂದರ್ಭದಲ್ಲಿ ಅವರೂ ಕೂಡ ನಮ್ಮೊಡನೆ ಸಹಕರಿಸಬೇಕು ಕೆಲವು ಕಡೆ ನಮ್ಮ ಕಣ್ಣಿಗೆ ಕಾಣುವಂತೆ ಹಾಗೂ ಶಾಸಕರ ಕಣ್ಣಿಗೆ ಕಾಣುವಂತೆ ಕೆಲವು ಲೋಪದೋಷಗಳು ಆಗಿರುತ್ತದೆ. ಅಂತಹ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂಬ ಸೂಚನೆಯನ್ನು ಆಗಾಗ್ಗೆ ಕೊಡುತ್ತಿದ್ದೇವೆ. ಆದರೂ ಕೂಡ, ಅದರಿಂದ ಹೆಚ್ಚು ಪ್ರಯೋಜನ ಆಗಿಲ್ಲ. ಜನಗಳಲ್ಲಿ ಅಂದರೆ ಬಳಕೆದಾರರಲ್ಲಿ ಹಾಗೂ ಪ್ರತಿಯೊಬ್ಬ ಅಧಿಕಾರಿಗಳಲ್ಲಿ ಕೂಡ ಒಂದು ಕಾನ್‌ಷಿಯಸ್‌ನೆಸ್ ಬರಬೇಕು ಇಂತಹ ಪರಿಸ್ಥಿತಿಯಲ್ಲಿ ನಾವು ವಿದ್ಯುತ್ತನ್ನು ಉಳಿಸಬೇಕು ಎಂಬ ಮನೋಭಾವ ಅವರಲ್ಲಿ ಬೆಳೆಯ ಬೇಕಾದುದು ಬಹಳ ಮುಖ್ಯ.

ಗಾಳಿಬೀಡು ಗ್ರಾಮದ ಪ್ರದೇಶದಲ್ಲಿ ಚಹಾ ತೋಟವನ್ನು ಸ್ಥಾಪಿಸಿರುವುದು.

೧೧೭೯ ಶ್ರೀ ಡಿ. ಎ. ಚಿನ್ನಪ್ಪ, (ಮಡಿಕೇರಿ).—ಮಾನ್ಯ ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧) ಗಾಳಿಬೀಡು ಗ್ರಾಮದ ಪ್ರದೇಶದಲ್ಲಿ ಸರ್ಕಾರವು ಚಹಾ ತೋಟವನ್ನು ಸ್ಥಾಪಿಸಿರುವುದು ನಿಜವೇ ?

೨) ಈ ಯೋಜನೆಗೆ ಈ ತನಕ ಮಾಡಲಾದ ವೆಚ್ಚ.

೩) ಈ ಯೋಜನೆಯನ್ನು ಯೋಜನಾ ಆಯೋಗವು ಅನುಮೋದಿಸಿದೆಯೆ ?

೪) ಈ ಯೋಜನೆಗೆ ಕೇಂದ್ರ ಸರ್ಕಾರದಿಂದ ಬಂದಿರುವ ಮೊತ್ತವೆಷ್ಟು ?

೫) ಈ ಯೋಜನೆಯನ್ನು ಸ್ಥಗಿತಗೊಳಿಸಲು ಹಾಗೂ ಸರ್ಕಾರೀ ಆದೇಶವನ್ನು ಹೊರಡಿಸದಿರಲು ಕಾರಣಗಳೇನು ?

ಶ್ರೀ ಜಿ. ಎಸ್. ಬಾಗಲಕೋಟ್ (ಅರಣ್ಯ ಮಂತ್ರಿಗಳು).—

೧) ಗಾಳಿಬೀಡು ಪ್ರದೇಶದಲ್ಲಿ ೧೯೮೪ನೇ ಇಸವಿಯಿಂದ ಸರ್ಕಾರವು ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮದ ಮುಖಾಂತರ ಚಹಾ ತೋಟವನ್ನು ಪ್ರಾಯೋಗಿಕವಾಗಿ ಬೆಳೆಸಲಾಗುತ್ತಿದೆ.

೨) ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮವು ರೂ. ೪೨.೫೦ ಲಕ್ಷಗಳನ್ನು ಪ್ರಾಯೋಗಿಕ ತೋಟಗಳನ್ನು ಸೃಜಿಸಲು ವೆಚ್ಚ ಮಾಡಿದೆ.

೩) ಇಲ್ಲ.

೪) ಪಶ್ಚಿಮ ಘಟ್ಟಗಳ ಅಭಿವೃದ್ಧಿ ಯೋಜನೆಯಡಿ ೧೯೮೫–೮೬ ಮತ್ತು ೧೯೮೬–೮೭ನೇ ಸಾಲಿನಲ್ಲಿ ಚಹಾ ತೋಟಗಳ ಪ್ರಾಯೋಗಕ್ಕಾಗಿ ರೂ. ೩೨ ಲಕ್ಷಗಳನ್ನು ಮಂಜೂರು ಮಾಡಿದೆ. (ಕ್ರಮವಾಗಿ ರೂ. ೫.೦೦ ಲಕ್ಷ ಮತ್ತು ೨೭.೦೦ ಲಕ್ಷ).

೫) ಯೋಜನೆಯು ಸರ್ಕಾರದ ಪರಿಶೀಲನೆಯಲ್ಲಿದೆ,

ಶ್ರೀ ಡಿ. ಎ. ಚಿನ್ನಪ್ಪ.—ಅಧ್ಯಕ್ಷರೆ ಈ ಯೋಜನೆಯನ್ನು ಕೈಗೆ ಎತ್ತಿಕೊಂಡು ಸುಮಾರು ೪ ವರ್ಷವಾಯಿತು. ಈ ಮಧ್ಯೆ ಏನಾಗಿದೆಯೆಂದರೆ ಕೆಲವಾರು ಜನ ಸೇರಿಕೊಂಡು ಈ ಯೋಜನೆಯನ್ನು

ಮಾಡಬಾರದೆಂದು ಮುಖ್ಯ ಮಂತ್ರಿಗಳ ಹತ್ತಿರ ಬಂದು ಇನ್‌ಫ್ಲುಯೆನ್ಸ್ ಮಾಡುತ್ತಿದ್ದಾರೆ. ಇದರ ಬಗೆ ಬಹಳ ನೊಂದು ಹೇಳುತ್ತೇನೆ. ಕೆಲವು ಜನ ಅರಣ್ಯ ಅಧಿಕಾರಿಗಳು ಸಹಿತ ಇದನ್ನು ಮಾಡಬಾರದೆಂಬ ಭಾವನೆಯನ್ನು ಹೊಂದಿದ್ದಾರೆ. ಈ ಜಾಗ ಸುಮಾರು ೪೬೦೦ ಅಡಿ ಎತ್ತರದಲ್ಲಿದೆ. ಬಡ ಜನರು ಇದ್ದಾರೆ ಅವರಿಗೆ ಪ್ರಯೋಜನ ಆಗಬಹುದೆಂದು ಸರ್ಕಾರ ಈ ಯೋಜನೆಯನ್ನು ಕೈಗೆ ಎತ್ತಿಕೊಂಡಿದೆ. ಇದಕ್ಕೆ ಸರ್ಕಾರದ ಕ್ಯಾಬಿನೆಟ್ ಡಿಸಿಷನ್ ಕೂಡ ಆಗಿದೆ. ಆದರೂ ಸಹಿತ ಈತನಕ ಸರ್ಕಾರೀ ಆದೇಶವನ್ನು ಏತಕ್ಕೆ ಇನ್ನು ಹೊರಡಿಸಿಲ್ಲ. ಇನ್ನು ಎರಡನೆಯ ಪ್ರಶ್ನೆ ಏನೆಂದರೆ ಅಪ್ಪಿಕೊ ಚಳುವಳಿ ಛಾಂಪಿಯನ್ ಬಹುಗುಣರವರು ಇಲ್ಲಿಗೆ ಭೇಟಿ ಕೊಟ್ಟಿದ್ದರು. ಇದನ್ನು ಮಾಡಬೇಕೋ ಬೇಡವೋ ಎಂಬುದರ ಬಗ್ಗೆ ಪ್ರೆಸ್ ಸ್ಟೇಟ್‌ಮೆಂಟ್ ಕೊಟ್ಟರು. ಅದನ್ನು ಮಾಡಬಹುದೆಂದು ಇಲ್ಲಿ ಹೇಳಿ, ನಂತರ ಮುಖ್ಯ ಮಂತ್ರಿಗಳ ಹತ್ತಿರ ಬಂದು ಪುನಃ ಪರಿಶೀಲನೆ ಮಾಡಿ ನೋಡಬೇಕೆಂದು ಹೇಳಿದ್ದಾರೆ. ಇದು ಸರ್ಕಾರದ ಪರಿಶೀಲನೆಯಲ್ಲಿದೆಯೆಂದು ಹೇಳಿದ್ದಾರೆ. ಇದಕ್ಕೆ ಈಗಾಗಲೇ ೪೨ ಲಕ್ಷ ರೂಪಾಯಿ ಖರ್ಚಾಗಿದೆ. ವೆಸ್ಟರ್ನ್‌ಘಾಟ್ ಯೋಜನೆಯಲ್ಲಿ ಕೇಂದ್ರ ಸರ್ಕಾರದಿಂದ ಹಣ ಕೂಡ ಇದಕ್ಕೆ ಬರುತ್ತಿದೆ. ಆದ್ದರಿಂದ ಇದನ್ನು ಕೂಡಲೇ ಮಾಡಬೇಕೆಂದು ಸನ್ಮಾನ್ಯ ಸಚಿವರಿಗೆ ವಿನಂತಿಸಿಕೊಳ್ಳುತ್ತೇನೆ. ಇದನ್ನು ಕೈಬಿಡಬಾರದು ಎಂದು ಕೇಳಿಕೊಳ್ಳುತ್ತೇನೆ. ಆ ಊರಿನ ೭-೮ ಗ್ರಾಮಗಳ ಜನ ಒಂದು ಕಮಿಟಿ ಮಾಡಿ ಒಂದು ಮನವಿಯನ್ನು ಕೂಡ ಕೊಟ್ಟಿದ್ದಾರೆ. ಆದ್ದರಿಂದ ಇದನ್ನು ಕೈಗೆತ್ತಿಕೊಂಡು ಬೇಗ ಮುಗಿಸಿಯೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಎಸ್. ಬಾಗಲಕೋಟ್.—ಸರ್ಕಾರ ಉದ್ದೇಶ ಕೂಡ ಆದಷ್ಟು ತೀವ್ರವಾಗಿ ಈ ಯೋಜನೆಯನ್ನು ಕೈಗೊಳ್ಳಬೇಕೆಂದು ಇದೆ. ಸದಸ್ಯರ ಕಳಕಳಿ ನಮಗೂ ಅರ್ಥವಾಗಿದೆ. ಆದಷ್ಟು ತೀವ್ರ ದಿಸೆಯಲ್ಲಿ ನಿರ್ಧಾರ ತೆಗೆದುಕೊಂಡು ಈ ಯೋಜನೆಯನ್ನು ಕಾರ್ಯಗತಗೊಳಿಸಲಾಗುತ್ತದೆ ಎಂದು ಹೇಳುತ್ತೇನೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ತಾಮ್ರದ ಗಣಿಗಳ ವಾರ್ಷಿಕ ಆದಾಯದ ಬಗ್ಗೆ

೧೮೩೫. **ಶ್ರೀ ಎನ್. ಎಂ. ಅಡ್ಯಂತಾಯ (ಸುರತ್ಕಲ್).**—ಮಾನ್ಯ ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರಿ ಸ್ವಾಮ್ಯದಲ್ಲಿರುವ ತಾಮ್ರದ ಗಣಿಗಳಿಂದ ಬರುತ್ತಿರುವ ವಾರ್ಷಿಕ ಆದಾಯವೆಷ್ಟು;

ಆ) ಖಾಸಗಿಯವರಿಗೆ ಗುತ್ತಿಗೆ ನೀಡಿರುವ ತಾಮ್ರದ ಗಣಿಗಳ ಪ್ರಮಾಣ ಹಾಗೂ ಅದರಿಂದ ಬರುತ್ತಿರುವ ಆದಾಯ ವೆಷ್ಟು ;

ಇ) ಕಳೆದ ಮೂರು ವರ್ಷಗಳಿಂದ ಕಲ್ಯಾಡಿ ಮತ್ತು ಇಂಗಳದಾಳು ತಾಮ್ರದ ಗಣಿಗಳಲ್ಲಿ ಈವರೆವಿಗೆ ಹೂಡಲಾಗಿರುವ ಬಂಡವಾಳ ಮೊತ್ತ ಹಾಗೂ ಬಂದಿರುವ ಆದಾಯವೆಷ್ಟು (ಪ್ರಾರಂಭದಿಂದ ೩೧-೩-೮೮ರವರೆಗೆ)

ಈ) ಹಣಕಾಸಿನ ಅವ್ಯವಹಾರಗಳು ನಡೆದಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೋ ;

ಉ) ಹಾಗಿದ್ದಲ್ಲಿ, ಅಂತಹ ಪ್ರಕರಣಗಳೆಷ್ಟು? ಮತ್ತು ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ರಮೇಶ್ ಸಿ. ಜಿಗಜಿಣಗಿ (ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಮಂತ್ರಿಗಳು).—

ಅ) ಇಲ್ಲ.

ಆ) ಖಾಸಗಿಯವರಿಗೆ ತಾಮ್ರದ ಗಣಿಗಳನ್ನು ಗುತ್ತಿಗೆಗೆ ಕೊಟ್ಟಿರುವುದಿಲ್ಲ.